ಇಂದು ದಿಃ 09.06.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎ ಎಸ್ ವಕೀಲರಿಂದಃ

6ನೇ ಪ್ರತಿವಾದಿಯು ನನ್ನ ಹೆಂಡತಿ. ಅವರ ವಿಚಾರಣೆಗೆ ನಾನು ಹಾಜರಿದ್ದು ಅವರ ಪರವಾಗಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. 22.06.2021ರಂದು ನನ್ನ ಹೆಂಡತಿ ದಾವಾ ಆಸ್ತಿಯನ್ನು ದೊರೆಸ್ವಾಮಿ ಮತ್ತು ಅವರ ಹೆಂಡತಿ ಮಕ್ಕಳಿಂದ ಖರೀದಿಸಿದ್ದರು. ಆಸ್ತಿ ಖರೀದಿಸುವ 2-3 ತಿಂಗಳ ಹಿಂದೆ ನಾನು 1 ರಿಂದ 5ನೇ ಪ್ರತಿವಾದಿಗಳನ್ನು ಭೇಟಿಯಾಗಿದ್ದೆ. ದಾವಾ ಆಸ್ತಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳನ್ನು 1 ರಿಂದ 5ನೇ ಪ್ರತಿವಾದಿಗಳಿಂದ ಪಡೆದುಕೊಂಡಿದ್ದೆ ಮತ್ತು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ದಾಖಲೆಗಳೆಂದರೆ ಆರ್ ಟಿ ಸಿ, ಎಂ ಆರ್ ಗಳನ್ನು ಪಡೆದುಕೊಂಡಿದ್ದೇನೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದು 6ನೇ ಪ್ರತಿವಾದಿ ಖರೀದಿಸಿದ್ದರು.

6ನೇ ಪ್ರತಿವಾದಿ/ನನ್ನ ಹೆಂಡತಿ ಗೃಹಿಣಿ. ನಾನು ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ. ಸಾಮಾನ್ಯವಾಗಿ ನಾನು ಒಂದು ಆಸ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನೋಡಿ ನಂತರ ವ್ಯವಹಾರ ಮಾಡುತ್ತೇನೆ. ಆಸ್ತಿ ಖರೀದಿ ಪೂರ್ವದಲ್ಲಿ ಕರಾರು ಮಾಡಿಕೊಳ್ಳುತ್ತೇವೆ ಎಂದರೆ ಸರಿ. ರೂ 5 ಸಾವಿರಗಳನ್ನು ಸಾಂಕೇತಿಕ ಹಣವಾಗಿ ಕೊಟ್ಟಿರುತ್ತೇನೆ. ಒಂದು ಕರಾರು ರೀತಿಯ ದಾಖಲೆಯನ್ನು ಖರೀದಿ ಪೂರ್ವದಲ್ಲಿ ಮಾಡಿಕೊಂಡಿದ್ದು ಅದನ್ನು ನೊಂದಾವಣೆ ಮಾಡಿಲ್ಲ. 6ನೇ ಪ್ರತಿವಾದಿ 1 ಎಕರೆ 31 ಗುಂಟೆ ಜಮೀನು ಖರೀದಿಸಿದ್ದರು. ಸರ್ಕಾರಿ ಮೌಲ್ಯ ರೂ 3,50,000/- ಕೊಟ್ಟು ಜಮೀನನ್ನು ಖರೀದಿಸಿದ್ದೆವು. ಆ ಆಸ್ತಿಯ ನಿಜವಾದ ಮೌಲ್ಯ ರೂ 50 ಲಕ್ಷಕ್ಕಿಂತ ಮೇಲ್ಪಟ್ಟಿದ್ದು ಅದು ನ್ಯಾಯಾಲಯಕ್ಕೆ ತಿಳಿಯಬಹುದು ಎಂದು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

1ನೇ ಪ್ರತಿವಾದಿಯ ವಾರಸುದಾರರು ಅಂದರೆ ಅಕ್ಕ ತಂಗಿ ಅಣ್ಣ ತಮ್ಮ ಇದ್ದಾರಾ ಎಂದು ನಾನು ವಿಚಾರಿಸಿಲ್ಲ. ವಾದಿಯು ಪ್ರತಿವಾದಿಗಳ ಸಹೋದರಿ ಎಂದು ಆಗ ಗೊತ್ತಿರಲಿಲ್ಲ, ದಾವೆ ಸಲ್ಲಿಸಿದ ನಂತರ ತಿಳಿಯಿತು. ಆ ವಿಚಾರ ತಿಳಿದ ನಂತರವೂ ಸಹ ನಾನು ಪ್ರತಿವಾದಿಗಳ ವಿರುದ್ಧ ಮೋಸ ಮಾಡಿದ್ದರು ಎಂದು ನಾನು ದೂರು ಕೊಟ್ಟಿಲ್ಲ. ವಾದಿಯು 1ನೇ ಪ್ರತಿವಾದಿಯ ಸಹೋದರಿಯಾದ ಕಾರಣ ದಾವಾ ಆಸ್ತಿಯಲ್ಲಿ ಅವರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾದ ಕಾರಣ 1ನೇ ಪ ಪ್ರತಿವಾದಿಗೆ ಇರುವಷ್ಟೇ ಹಕ್ಕು ವಾದಿಗೆ ಇದೆ ಎಂದರೆ ಸುಳ್ಳು. ಆರ್ ಟಿ ಸಿ ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಖರೀದಿ ಪೂರ್ವದಲ್ಲಿ ನಾನು ನೋಡಿಲ್ಲ ಎಂದರೆ ಸರಿ. ವಾದಿಗೆ ಆಸ್ತಿಯಲ್ಲಿ ಹಕ್ಕು ಇರುವ ವಿಚಾರ ತಿಳಿದಿದ್ದು 1ನೇ ಪ್ರತಿವಾದಿ ಮರೆಮಾಚಿ ಮಾಡಿಸಿದ ಖಾತೆ ಆಧಾರದಲ್ಲಿ ಆಸ್ತಿ ಖರೀದಿಸಿದ್ದೇನೆ ಎಂದರೆ

ಸುಳ್ಳು. ಮೂಲ ದಾಖಲೆಗಳನ್ನು ಪ್ರತಿವಾದಿಗಳು ನನಗೆ ಕೊಟ್ಟಿದ್ದಾರೆ ಎಂದು ಖರೀದಿ ಪತ್ರದಲ್ಲಿ ಬರೆದಿದ್ದರೂ ಸಹ ನಾನು ಮೂಲ ಪತ್ರವನ್ನು ಕೊಟ್ಟಿಲ್ಲ ಎಂದರೆ ಆರ್ ಟಿ ಸಿ ಮಾತ್ರ ದಾಖಲಾತಿ ಇದ್ದು ಅವರಿಗೆ ಆಸ್ತಿ ಹೇಗೆ ಬಂತು ಎಂದು ಕ್ರಯಪತ್ರದ 2ನೇ ಪುಟದಲ್ಲಿ ಇದೆ. ವಾದಿಗೆ ಆಸ್ತಿಯಲ್ಲಿ ಹಕ್ಕು ಇದೆ ಎಂದು ಪ್ರತಿವಾದಿ ಹೇಳಿದ್ದರೂ ಸಹ ಆ ವಿಚಾರವನ್ನು ಮರೆಮಾಚಿ ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನೇ ತಯಾರಿಸಿ ಖರೀದಿಸಿದ್ದೆ ಎಂದರೆ ಸುಳ್ಳು.

ದಾವಾ ಆಸ್ತಿಗೆ 2022ರಲ್ಲಿ ಎಕರೆಗೆ ಮಾರುಕಟ್ಟೆ ಮೌಲ್ಯ ರೂ.20 ಲಕ್ಷ ಇರಬಹುದು ಆದರೆ ನಿಜವಾದ ಮೌಲ್ಯ ರೂ 50 ಲಕ್ಷ ಇರಬಹುದು ಎಂದರೆ ಅದು ನನಗೆ ಗೊತ್ತಿಲ್ಲ. ಆಸ್ತಿಯ ಮೌಲ್ಯ ಜಾಸ್ತಿ ಇರುವ ಕಾರಣ ವಾದಿಗೆ ಬಿಟ್ಟುಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 5ನೇ ಪ್ರತಿವಾದಿಗಳನ್ನು ನಾನೇ ಉದ್ದೇಶಪೂರ್ವಕವಾಗಿ ನಾನೇ ನ್ಯಾಯಾಲಯಕ್ಕೆ ಹಾಜರಾಗದ ಹಾಗೆ ನೋಡಿಕೊಂಡಿದ್ದೇನೆ ಎಂದರೆ ಸುಳ್ಳು. ನಿ ಡಿ 9 ರ ಪ್ರಕಾರ 1ನೇ ಪ್ರತಿವಾದಿಗೆ ಆಸ್ತಿ ಖಾತೆಯು ಪೌತಿ ಆಧಾರದಲ್ಲಿ ಬಂದಿದೆಯೇ ಹೊರತಾಗಿ ಬೇರೆ ವಿವರಗಳು ಇಲ್ಲ ಎಂದರೆ ಸರಿ. ಆಸ್ತಿಯ ಖಾತೆಯನ್ನು 1ನೇ ಪ್ರತಿವಾದಿ ವಾದಿಗೆ ತಿಳಿಯದ ರೀತಿಯಲ್ಲಿ ಮಾಡಿಸಿದ್ದಾರೆ ಎಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.